ದಿನಾಂಕ **09.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟಿ ಸವಾಲು ಃ ಅರ್ಜಿದಾರರ ಪರ ವಕೀಲರಿಂದ

ನಿಂಗೇಗೌಡರರು ನನ್ನ ತಂದೆಯ ತಂದೆ. ನನ್ನ ಅಜ್ಜ 23.01.2023 ರಂದು ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ಅವರ ಹೆಂಡತಿ ನಾಗಮ್ಮ ಬದುಕಿದ್ದರು ಎಂದರೆ ಸರಿ. ನಿಂಗೇಗೌಡರು ಮತ್ತು ಅವರ ಹೆಂಡತಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ಮರಣ ಶಾಸನ ಮಾಡಿದ ಆಸ್ತಿಗಳು ಸರ್ವೆ ನಂ. 188/1, 158/5, 130/1, 136/1ಆಗಿರುತ್ತವೆ. ಸರ್ವೆ ನಂ. 188/1 ರ ಪಹಣಿಯಲ್ಲಿ 3 ಎಕರೆ ನನ್ನ ಅಜ್ಜನ ಹೆಸರಿನಲ್ಲಿ ಇತ್ತು. ಆ ಬಗ್ಗೆ ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಹೇಳಿದ ಮರಣ ಶಾಸನದ ಸಂಬಂಧ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿತ್ತು ಎಂದರೆ ಸರಿ. ನನ್ನ ತಾತ ತೀರಿಕೊಂಡ ದಿನ ಸಾಕ್ಷಿದಾರರು ಮರಣ ಶಾಸನ ಇರುವ ಬಗ್ಗೆ ತಿಳಿಸಿದರು. ಅವರುಗಳೆಂದರೆ ಶ್ರೀನಿವಾಸಾಚಾರ್ ಮತ್ತು ಚಂದ್ರೇಗೌಡ. ಚಂದ್ರೇಗೌಡ ಬಿನ್ ಸುಬ್ಬೇಗೌಡ, 60 ವರ್ಷ, ಕಲ್ಕೆರೆ ಗ್ರಾಮ, ನುಗ್ಗೆಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು ಅವರ ವಿಳಾಸವಾಗಿರುತ್ತದೆ. ಅದೇ ರೀತಿ ಇನ್ನೊಬ್ಬ ಸಾಕ್ಷಿ ಶ್ರೀನಿವಾಸಾಚಾರ್ ಬಿನ್ ತಿಮ್ಮಾಚಾರ್, 65 ವರ್ಷ, ಕಲ್ಕೆರೆ ಗ್ರಾಮ, ನುಗ್ಗೆಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು. ಮರಣ ಶಾಸನವನ್ನು ಯಾವಾಗ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ, ಆದರೆ ವಿಲ್ ದಿನಾಂಕ 18.09.2020 ಆಗಿರುತ್ತದೆ. ನಿಂಗೇಗೌಡರಿಗೆ ವಯಸ್ಸಾದ ಕಾರಣ ಮದ್ಯಪಾನ ಮಾಡುವ ಹವ್ಯಾಸ ಇತ್ತು ಎಂದರೆ ಸರಿಯಲ್ಲ.

ನಿಂಗೇಗೌಡರ ಹೆಣ್ಣು ಮಕ್ಕಳು ಒ.ಎಸ್.ನಂ. 101/2019 ರಂತೆ ದಾವೆಯನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆ 22.04.2021 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಆ ದಾವೆ ಇತ್ಯರ್ಥಕ್ಕೆ ಬಾಕಿ ಇರುವಾಗ ನಾವುಗಳು ಮೋಸ ಮಾಡಿ ನಿಂಗೇಗೌಡರಿಂದ ಅಕ್ರಮವಾಗಿ ವಿಲ್ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. FDP

ಪ್ರಕರಣದಲ್ಲಿ ಆಸ್ತಿಗಳನ್ನು ಅಳತೆ ಮಾಡಲು ಸರ್ವೆಯರ್ ಸ್ಥಳಕ್ಕೆ ಬಂದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ನಿಂಗೇಗೌಡರಿಗೆ ವಿಲ್ ಮಾಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾಗಮ್ಮನಿಗೆ ಮೋಸ ಮಾಡುವ ಉದ್ದೇಶದಿಂದ ನಾವುಗಳು ನಿಂಗೇಗೌಡರಿಗೆ ಕುಡಿಸಿ ಕರೆದುಕೊಂಡು ಹೋಗಿ ಮೋಸದಿಂದ ವಿಲ್ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕಾನೂನಿಗೆ ವಿರುದ್ಧವಾಗಿ ಪತ್ರವನ್ನು ಬರೆಸಿಕೊಂಡಿರುತೇವೆ ಎಂದರೆ ಸರಿಯಲ್ಲ. ಸುಳ್ಳು ವಿಲ್ಲನ್ನು ನಾವೇ ತಯಾರು ಮಾಡಿ ಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.